1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 97/2021

ದಿನಾಂಕ ಃ 26.11.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 30 ಪಿ.ಡಬ್ಲ್ಯೂ :25

| | |
|---|---|
| ಸಾಕ್ಷಿದಾರರ ಹೆಸರು | ಸಂತೋಷ್ ಕೆ |
| ತಂದೆಯ ಹೆಸರು | ಲಕ್ಷ್ಮಣ್ |
| ವಯಸ್ಸು | 48 ವರ್ಷ |
| ಉದ್ಯೋಗ | ಡಿ.ವೈ.ಎಸ್.ಪಿ, ಸಿಐಡಿ, ಘಟಕ, ಬೆಂಗಳೂರು. |
| ವಾಸ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ದಿಃ 11.07.2020 ರಿಂದ ದಿಃ 27.01.2023 ರವರೆಗೆ ನಾನು ಮಂಡ್ಯ ನಗರ ವೃತ್ತದ ವೃತ್ತ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೆನು.

2) ದಿಃ 28.04.2021 ರಂದು ಬೆಳಗ್ಗೆ ಈ ಪ್ರಕರಣದ ಕಡತವನ್ನು ಪ್ರಾಸಾ.23 ರವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ನಂತರ ಅದೇ ದಿನ ಕೃತ್ಯ ಸ್ಥಳವಾದ ಹಳೆ ಎಂ.ಸಿ. ರಸ್ತೆಯ ಈದ್ಗಾ ಮೈದಾನದ ವಾಣಿಜ್ಯ ಮಳಿಗೆಯ ನಂಃ 30 - ಕಿಸಾನ್ ಪೈಂಟ್ಸ್ ಅಂಡ್ ಹಾರ್ಡ ವೇರ್ ಮುಂಭಾಗಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸಮಯದಲ್ಲಿ ಮೃತನ ಶವವು ಸ್ಥಳದಲ್ಲಿ ಇತ್ತು. ಪಂಚರಾದ ಪ್ರಾಸಾ.

2 ಮತ್ತು 3 ರವರಿಗೆ ಲಿಖಿತ ನೋಟಿಸನ್ನು ಜಾರಿ ಮಾಡಿ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಸದರಿ ಸ್ಥಳದಲ್ಲಿ ಫ್ರಾಸಾ.1 ರವರು ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರಾದ ಫ್ರಾಸಾ. 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಕ್ರಮವನ್ನು ಬೆಳಗ್ಗೆ 7.30 ರಿಂದ 9.00 ಗಂಟೆ ತನಕ ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಕೃತಕ್ಕೆ ಬಳಸಿದ್ದ ರಕ್ತದ ಕಲೆ ಇರುವ ದಿಂಡುಗಲ್ಲು, ರಕ್ತದ ಕಲೆ ಇದ್ದ ಚಾಪೆ,ರಕ್ತದ ಕಲೆ ಇದ್ದ ಬೆಡ್ ಶೀಟ್, ರಕ್ತದ ಕಲೆ ಇದ್ದ ಟವಲ್, ರಕ್ತದ ಕಲೆ ಇದ್ದ ಪ್ಲಾಸ್ಟಿಕ್ ಗೋಣಿ ಚೀಲ, ರಕ್ತದ ಕಲೆ ಇದ್ದ ಗಾರೆ ಚೂರು, ಸಾದಾ ಗಾರೆ ಚೂರು, ಒಂದು ಜೊತೆ ಚಪ್ಪಲಿ, ಒಂದು ಬಿಳಿಯ ಬಣ್ಣದ ಪ್ಲಾಸ್ಟಿಕ್ ದೊಡ್ಡ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚರಿಗೆ ನೀಡಿದ ನೋಟಿಸುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು, ಅವುಗಳಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು.

3) ಸಾಕ್ಷಿಯು ಮುದ್ದೆ ಮಾಲು -1 - ಪ್ಲಾಸ್ಟಿಕ್ ಚೀಲ, ಮುಮಾ.2- ದಿಂಡುಗಲ್ಲು, ಮುಮಾ.3 - ಪ್ಲಾಸ್ಟಿಕ್ ಚಾಪೆ, ಮುಮಾ.4- ಟವಲ್, ಮುಮಾ.5 - ಬೆಡ್ ಶೀಟ್, ಮುಮಾ.6 - ಪ್ಲಾಸ್ಟಿಕ್ ಡಬ್ಬದಲ್ಲಿ ಇರುವ ಗಾರೆ ಚೂರು, ಮುಮಾ7- ಪ್ಲಾಸ್ಟಿಕ್ ಡಬ್ಬದಲ್ಲಿ ಇರುವ ಸಾದಾ ಗಾರೆ ಚೂರನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮುಮಾ.1 ರಿಂದ

7 ಮತ್ತು 11 ನ್ನು ಇರಿಸಿರುವ ಬಿಳಿಯ ಚೀಲದ ಮೇಲೆ ಅಂಟಿಸಲಾದ ಚೀಟಿಯಲ್ಲಿ ಇರುವ ತನ್ನ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಮುಮಾ.1(ಸಿ), 2(ಡಿ), 3(ಸಿ), 4(ಸಿ), 5(ಸಿ), 6(ಸಿ), 7(ಸಿ) ಎಂದು ಗುರುತಿಸಲಾಯಿತು. ಅಭಿಯೋಜನೆಯ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಾಜರು ಪಡಿಸಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನು ಮುಮಾ.19 ಎಂದು ಗುರುತಿಸಲಾಯಿತು. ಅಭಿಯೋಜನೆಯು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಂದು ಜೊತೆ ಚಪ್ಪಲಿಯನ್ನುಹಾಜರು ಪಡಿಸಿದ್ದು ಸಾಕ್ಷಿಯು ಒಂದು ಜೊತೆ ಚಪ್ಪಲಿಯನ್ನು ಘಟನಾ ಸ್ಥಳದಲ್ಲಿ ಮಹಜರ್ ಕಾಲದಲ್ಲಿ ಅಮಾನತ್ತು ಪಡಿಸಿಕೊಂಡ ಚಪ್ಪಲಿ ಎಂದು ಗುರುತಿಸಿರುತ್ತಾರೆ. ಸದರಿ ಒಂದು ಜೊತೆಚಪ್ಪಲಿಯನ್ನು ಮುಮಾ.20 ಎಂದು ಗುರುತಿಸಲಾಯಿತು.

4) ನಂತರ ಸ್ಥಳದಲ್ಲಿ ಮಹಜರ್ ಕಾಲದಲ್ಲಿ ಫೋಟೋಗಳನ್ನು ತೆಗೆದುಕೊಂಡಿರುತ್ತೇನೆ. ಸದರಿ ಫೋಟೋ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.4 ರಿಂದ 8 ಎಂದು ಗುರುತಿಸಲಾಗಿದ್ದು, ನಿಪಿ.5, 7 ಮತ್ತು 8 ರ ಕೆಳಭಾಗದಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.5(ಎ), ನಿಪಿ.7(ಎ), ನಿಪಿ.8(ಎ) ಎಂದು ಗುರುತಿಸಲಾಯಿತು.

5) ಮೃತನ ಸಂಬಂಧಿಕರು ಯಾರ ಇಲ್ಲದೇ ಇದ್ದುದರಿಂದ ಮತ್ತು ಶವವು ಸಾರ್ವಜನಿಕ ಸ್ಥಳದಲ್ಲಿ ಇದ್ದುದರಿಂದ ಶವವನ್ನು ಮಿಮ್ಸ್ ಮಂಡ್ಯ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಂತರ ಸದರಿ ಮಹಜರ್ ಸ್ಥಳದಲ್ಲಿ ಆರೋಪಿಯ ಪತ್ತೆ ಕಾರ್ಯಕ್ಕೆ ಕ್ರಮ ಕೈಗೊಳ್ಳುವಂತೆ ಫ್ರಾಸಾ.23 ರವರಿಗೆ ಸೂಚಿಸಿರುತ್ತೇನೆ.

6) ಸದರಿ ಕಿಸಾನ್ ಪೈಂಟ್ಸ ಅಂಡ್ ಹಾರ್ಡವೇರ್ ಅಂಗಡಿಯ ಮಾಲಿಕರಾದ ಆಸೀಫ್ ಪಾಷಾ - ಫ್ರಾಸಾ. 6 ರವರಿಗೆ, ಸದರಿ ಅಂಗಡಿಯಲ್ಲಿ ಅಳವಡಿಸಲಾದ ಸಿಸಿಟಿವಿ ಯನ್ನು ಪರಿಶೀಲನೆ ಮಾಡುವ ಸಲುವಾಗಿ ನೋಟಿಸನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.43 ಎಂದು, ಸಾಕ್ಷಿಯ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು.

7) ನಂತರ ಮೃತನ ವಾರಸುದಾರರ ಪತ್ತೆ ಮತ್ತು ಆತನ ವಿಳಾಸವನ್ನು ಪತ್ತೆ ಮಾಡಲು ಫ್ರಾಸಾ.23 ರವರಿಗೆ ನಿರ್ದೇಶನ ನೀಡಿರುತ್ತೇನೆ. ಸದರಿ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8) ಅದೇ ದಿನ ಮಧ್ಯಾಹ್ನ ಮಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ, ಪಂಚರಾದ ಫ್ರಾಸಾ. 11, 12 ಮತ್ತು 16 ರವರ ಸಮಕ್ಷಮದಲ್ಲಿ ಮಧ್ಯಾಹ್ನ 1.30 ರಿಂದ 3.30 ಗಂಟೆ ತನಕ ಮೃತನ ಶವ ಪಂಚನಾಮೆ ಕ್ರಮವನ್ನು ರವರಗೆ ಜರುಗಿಸಿತ್ತೇನೆ. ಸದರಿ ಸಮಯದಲ್ಲಿ ಫ್ರಾಸಾ. 13 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಶವ

ಪಂಚನಾಮೆ ಕಾಲದಲ್ಲಿ ಫೋಟೋ ವನ್ನು ತೆಗೆಯಿಸಿಕೊಂಡಿರುತ್ತೇನೆ. ಸದರಿ ಶವ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.21(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 44 ಎಂದು, ಸಾಕ್ಷಿಯ ಸಹಿಯನ್ನು ನಿಪಿ.44(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಪಂಚನಾಮೆಯ ಪಂಚರಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.45 ಎಂದು, ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

9) ಮೃತನ ವಾರಸುದಾರರು ಯಾರು ಪತ್ತೆಯಾಗದೇ ಇದ್ದುದರಿಂದ, ವಾರಸುದಾರರ ಪತ್ತೆಯಾಗುವ ತನಕ ಶವವನ್ನು ಶವಾಗಾರದಲ್ಲಿ ಇರಿಸಿಕೊಳ್ಳಲು ಮಿಮ್ಸ್ ಆಸ್ಪತ್ರೆಗೆ ಪ್ರಾಸಾ. 23 ರವರು ಮನವಿ ನೀಡಿರುತ್ತಾರೆ. ಶವದ ಬೆಂಗಾವಲಿಗೆ ಸಿಬ್ಬಂದಿಳನ್ನು ನೇಮಕ ಮಾಡಿರುತ್ತೇನೆ

10) ಅದೇ ದಿನ ಸಂಜೆ ಕಿಸಾನ್ ಪೈಂಟ್ಸ್ ಮತ್ತು ಹಾರ್ಡ್ವೇರ್ ಅಂಗಡಿಗೆ ಭೇಟಿ ನೀಡಿ ಸಂಜೆ 4 ರಿಂದ 5.30 ಗಂಟೆ ತನಕ ಸಿಸಿಟಿವಿಯ ಪರಿಶೀಲನೆಯನ್ನು ಪಂಚರಾದ ಪ್ರಾಸಾ. 4 ಮತ್ತು 10 ರವರ ಸಮಕ್ಷಮದಲ್ಲಿ ಮಾಡಿರುತ್ತೇನೆ. ಸದರಿ ಹಾರ್ಡ್ವೇರ್ ಅಂಗಡಿಗೆ ಒಟ್ಟು 5 ಸಿಸಿಟಿವಿ ಕ್ಯಾಮಾರಾಗಳನ್ನು ಅಳವಡಿಸಲಾಗಿದ್ದು, 2 ಕ್ಯಾಮಾರಾಗಳು ಅಂಗಡಿಯ ಹೊರ ಭಾಗದಲ್ಲಿ ಅಳವಡಿಸಲಾಗಿರುತ್ತದೆ. ಸದರಿ ಅಂಗಡಿಯ ಹೊರ ಭಾಗದಲ್ಲಿ ಅಳವಡಿಸಲಾದ ಸಿಸಿಟಿ ವಿ ಕ್ಯಾಮಾರಾದ ಫುಟೇಜ್ಗಳನ್ನು

ಸದರಿ ಪೈಂಟ್ ಅಂಗಡಿಯ ಒಳಭಾಗದಲ್ಲಿ ಮಾನಿಟರ್ ಮೂಲಕ ವೀಕ್ಷಣೆ ಮಾಡಿರುತ್ತೇನೆ. ಸದರಿ ಕ್ರಮಗಳನ್ನು ಮಾಡಲು ಸಿಸಿಟಿವಿ ಟೆಕ್ನಿಷಿಯನ್ ಪ್ರಾಸಾ. 5 ರವರ ಸಹಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಪರಿಶೀಲನೆ ಸಮಯದಲ್ಲಿ ಪ್ರಾಸಾ. 1 ರವರು ಹಾಜರಿದ್ದರು ಹಾಗೆಯೇ ಸದರಿ ಅಂಗಡಿಯ ಮಾಲೀಕರಾದ ಪ್ರಾಸಾ. 6 ರವರೂ ಸಹ ಹಾಜರಿದ್ದರು. ಸದರಿಯವರ ಮತ್ತು ಪಂಚರ ಸಮಕ್ಷಮದಲ್ಲಿ ಕೂಲಂಕುಷವಾಗಿ ಸಿಸಿಟಿವಿ ಫುಟೇಜ್ಗಳನ್ನು ವೀಕ್ಷಣೆ ಮಾಡಿದಾಗ, ಸದರಿ ಮೃತನು ಅಂಗಡಿಯ ಮುಂದೆ ಮಲಗಿದ್ದ ಸಮಯದಲ್ಲಿ ಒಬ್ಬ ವ್ಯಕ್ತಿಯು ಬಂದು, ಬ್ಯಾಗಿನಲ್ಲಿ ಒಂದು ಕಲ್ಲನ್ನು ಎತ್ತಿಕೊಂಡು ಬಂದು ಅತನ ಹತ್ತಿರ ಕುಳಿತುಕೊಂಡು ಮೃತನೊಂದಿಗೆ ಮಾತನಾಡಿ ಮೃತನು ಮಲಗಿದ ನಂತರ ಯಾವುದೋ ಕಾರಣದಿಂದ ತಾನು ಬ್ಯಾಗಿನಲ್ಲಿ ತಂದಿದ್ದ ಕಲ್ಲನ್ನು ಸದರಿ ವ್ಯಕ್ತಿಯು ಎತ್ತಿಕೊಂಡು ಹಲವಾರು ಬಾರಿ ಮೃತನ ಮೇಲೆ ಎತ್ತಿ ಹಾಕುತ್ತಿರುವುದು ಕಂಡು ಬಂದಿರುತ್ತದೆ. ನಾವು ಸಿಸಿಟಿವಿ ಪರಿಶೀಲನೆ ಮಾಡಿದಾಗ, ಸದರಿ ದೃಶ್ಯಾವಳಿಗಳು ಹಿಂದಿನ ದಿನ ರಾತ್ರಿ 8.25 ರಿಂದ 10.46 ಗಂಟೆ ತನಕ ದಾಖಲಾಗಿರುವುದು ಕಂಡು ಬಂದಿರುತ್ತದೆ. ಸದರಿ ಸಿಸಿಟಿವಿ ದೃಶ್ಯಾವಳಿಗಳನ್ನು ಪ್ರಾಸಾ. 5 ರವರ ಸಹಾಯದಿಂದ ಡಿವಿಆರ್ ನಿಂದ pendrive ಮುಾಲಕ ಸದರಿ ದೃಶ್ಯಾವಳಿಗಳನ್ನು ಪಡೆದುಕೊಂಡು, ಲ್ಯಾಪ್ ಟಾಪ್ ಮೂಲಕ 2 pendrive ಹಾಗೂ 2 DVD ಗಳಿಗೆ ಸದರಿ ದೃಶ್ಯಾವಳಿಗಳನ್ನು ಅಳವಡಿಸಿಕೊಂಡಿರುತ್ತೇವೆ. ನಂತರ ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಮಾಡಿಕೊಂಡು ನಕಾಶೆಯನ್ನು ಅದರಲ್ಲಿ

ಬರೆದುಕೊಂಡಿರುತ್ತೇನೆ. ಸದರಿ ಸಿಸಿಟಿವಿ ಪರಿಶೀಲನೆ ಮತ್ತು ಮಹಜರ್ ಸಮಯದಲ್ಲಿ ಫೋಟೋಗಳನ್ನು ತೆಗೆಯಿಸಿರುತ್ತೇನೆ. ಸದರಿ ಸಿಸಿಟಿವಿ ಪರಿಶೀಲನೆ ಕಾಲದಲ್ಲಿ ಫ್ರಾಸಾ. 1 ರವರು, ಸದರಿ ಮೃತ ವ್ಯಕ್ತಿಯ ಮೇಲೆ ಕಲ್ಲಿನಿಂದ ಹಲ್ಲೆ ಮಾಡಿದ ವ್ಯಕ್ತಿಯನ್ನು ಗುರುತಿಸಿ ಸದರಿ ವ್ಯಕ್ತಿಯು ಮುತ್ತುರಾಜ, ತನಗೆ ಪರಿಚಯ ಇರುವ ವ್ಯಕ್ತಿ ಎಂದು ತಿಳಿಸಿರುತ್ತಾರೆ. ಸದರಿ 2 pendrive ಹಾಗೂ 2 DVD ಗಳನ್ನು ನಾನು ವಶಕ್ಕೆ ಪಡೆದುಕೊಂಡಿರುತತೇನೆ. ಪೊಲೀಸ್ ಠಾಣೆ ಗೆ ವಾಪಸ್ಸಾದ ನಂತರ ಸದರಿ pendrive ಹಾಗೂ DVD ಗಳನ್ನು ಮಾಲು ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12(ಹೆಚ್) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಲಗೇ ನಿಪಿ.14 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ.14(ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಮಾ.8 pendrive ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಡಿವಿಡಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ.9 ಮತ್ತು 10 ಎಂದು ಗುರುತಿಸಲಾಗಿದೆ. ಸದರಿ ಮುಮಾ.9 ಮತ್ತು ಮುಮಾ.10 ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುಮಾ.9(ಎ) ಮತ್ತು ಮುಮಾ.10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ

ನಿಪಿ.9 ರಿಂದ 11 ಎಂದು ಗುರುತಿಸಲಾಗಿದ್ದು, ನಿಪಿ.10 ಮತ್ತು 11 ರ ಕೆಳಭಾಗದಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿಪಿ.10(ಎ) ಮತ್ತು ನಿಪಿ.11(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಅವಧಿ ಮುಗಿದಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(**ಶಿವಪ್ರಸಾದ್ ಕೆ.ಬಿ**)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.